ಶ್ರೀ ಕೆ. ವಸಂತ ಬಂಗೇರ.—ಮಂಗನ ಖಾಯಿಲೆ ಪ್ರಾರಂಭವಾಗಿದೆ. ಇನ್ನೂ ಮೂರು ನಾಲು ತಿಂಗಳು ಇರುವುದರಿಂದ, ಅದ್ಯತೆ ಕೊಟ್ಟು ಈ ವರ್ಷವೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಇನ್ನು ಎರಡು ತಿಂಗಳಲ್ಲಿ ಸಾಧ್ಯವಾಗುವುದಿಲ್ಲ. ಕಳೆದ ಸಾರಿ ಕೆಲವು ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ. ಇನ್ನೂ ಅವಶ್ಯಕತೆ ಇದ್ದರೆ ಕೊಳವೆ ಬಾವಿಗಳನ್ನು ಹಾಕಿಸೋಣ ೧೯೮೪-೮೫ ರಲ್ಲಿ ಮಂಜೂರಾತಿ ಇಟ್ಟು ಇದನ್ನು ಮಾಡಬೇಕಾಗಿ ಬರುತ್ತದೆ. ಮುಂದಿನ ಆರ್ಥಿಕ ವರ್ಷದಲ್ಲಿ ಮಾಡೋಣ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯದೇ ಇರುವುದರಿಂದ ನಾನು ಮತ್ತೊಮ್ಮೆ ಸದಸ್ಯರ ಹೆಸರುಗಳನ್ನು ಕರೆಯುತ್ತೇನೆ.

ಶ್ರೀ ಎಂ. ರಾಮಪ್ಪ.—(ಗೈರುಹಾಜರು)

ಶ್ರೀ ಜಿ. ಶಂಕರಗೌಡ.—(ಗೈರುಹಾಜರು)

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—(ಗೈರುಹಾಜರು)

ಶ್ರೀ ಹೆಚ್. ಜಿ. ಚನ್ನಪ್ಪ.—(ಗೈರುಹಾಜರು)

(ಪ್ರಶ್ನೋತ್ತರವೇಳೆ ಮುಗಿಯಿತು)

ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

ಬಳ್ಳಾರಿ ನಗರಕ್ಕೆ ಎರಡನೆ ಹಂತದ ನೀರು ಸರಬರಾಜು ಯೋಜನೆ

೪೫ (೧೩) ಶ್ರೀ ಎಂ. ರಾಮಪ್ಪ (ಬಳ್ಳಾರಿ). ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಎರಡನೇ ಹಂತದ ಬಳ್ಳಾರಿ ನಗರದ ನೀರು ಸರಬರಾಜು ಯೋಜನೆಯ ಕೆಲಸಗಳನ್ನು ಇನ್ನೂ ಪ್ರಾರಂಭ ಮಾಡಬೇಕಾಗಿರುವುದು ಸರಕಾರದ ಗಮನಕ್ಕೆ ಬಂದಿರುವುದೇ ?

ಆ) ಮೇಲ್ಕಂಡ ಕೆಲಸದ ಬಗ್ಗೆ ಜೀವವಿಮಾ ನಿಗಮವು ಏನಾದರೂ ಹಣವನ್ನು ಬಿಡುಗಡೆ ಮಾಡಿದೆಯೆ ? ಆಗಿದ್ದರೆ, ಎಷ್ಟು ಹಣ ಬಿಡುಗಡೆ ಮಾಡಿದೆ ? ಹಾಗೂ ಯಾವ ದಿನಾಂಕ ಬಿಡುಗಡೆ ಮಾಡಿದೆ ?

ಇ) ಎರಡನೇ ಹಂತದ ಯೋಜನೆಯ ಕಾರ್ಯಾವನ್ನು ಬೇಗ ಪ್ರಾರಂಭ ಮಾಡುವುದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಅ) ಹೌದು.

ಆ) ಜೀವವಿಮಾ ನಿಗಮದಿಂದ ಮಂಜೂರಾಗಿರುವ ೨೭೨ ಲಕ್ಷ ರೂ.ಗಳ ಪೈಕಿ, ೧೦೭ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಒಪ್ಪಿಗೆ ಕೊಟ್ಟಿದ್ದಾರೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಈ ಹಣವನ್ನು ಪಡೆಯಲು ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಇ) ಈ ಯೋಜನೆಗೆ ಆಡಳಿತಾತ್ಮಕ ಒಪ್ಪಿಗೆಯನ್ನು ನೀಡಿ, ಈಗಾಗಲೇ ಈ ಯೋಜನೆಯ ಕೆಲವು ಭಾಗಗಳಿಗೆ ಪ್ರಕಟಣೆಯನ್ನು (ಟೆಂಡರ್) ಆಹ್ವಾನಿಸಲಾಗಿದೆ.